ಮೋಹದಲ್ಲಿ ಮುಳುಗಿ ಮರುಳಾಗಿ ನುಗ್ಗುತ್ತಿರುವೆ! ನಶ್ವರದ ಪೂಜೆಗೆ ಚಿರಂತನವನ್ನು ಬಲಿಕೊಡಲು ಯೋಜಿಸುತ್ತಿರುವೆ. ನೋಡು, ಇದು ಪ್ರೇಮವಲ್ಲ, ಕಾಮದ ಚಿಹ್ನೆ! ಕ್ಷಣಿಕ ಸುಖ ಸಂಪಾದಿಸಲು ಶಾಶ್ವತದ ಬಲಿಯೆ! ದುರ್ಬಲತೆ ಏನಿದು? ಅರ್ಜುನ ದೇವ, ನಿನ್ನ ಪೌರುಷ ಕಥೆ ಬರಿಯ ಸುಳ್ಳು!'

**ನೀನಮೃತವೆನಗೆ; ನೀನಿಲ್ಲದಮೃತವೆ ಮೃತ್ಯು!**

'ನನ್ನ ಜೀವನ ಪರಮಪುರುಷಾರ್ಥ ರೂಪಿಣಿಯೆ, ಭುವನೈಕ ಮೋಹಿನಿಯೆ, ನೀನು ನನ್ನ ಸಂಪತ್ತಿಗೆ ಲಕ್ಷ್ಮಿ, ವಿದ್ಯೆಗೆ ವಾಣಿ. ಪರಮ ಸೌಂದರ್ಯಕ್ಕೆ ರತಿ. ಸರ್ವ ಅಭಿಲಾಷೆ ಆಕಾಂಕ್ಷೆಗಳ ಅಂತ್ಯ. ಪ್ರಾಣೇಶ್ವರಿ, ನೀನೆ ಶಾಶ್ವತ ಸತ್ಯ; ಉಳಿದುದೆಲ್ಲ ಬರಿಯ ನಶ್ವರ, ಮಿಥ್ಯೆ.

'ಪೂರ್ಣೆಯೆ, ನೀನಿಲ್ಲದೆ ಎಲ್ಲವೂ ಶೂನ್ಯ! ನೀನು ಅಮೃತ ನನಗೆ; ನೀನಿಲ್ಲದೆ ಅಮೃತವೆ ಮೃತ್ಯು! ನೀ ಮಾಯೆ, ನೀ ಮುಕ್ತಿ! ನೀನು ಇರಲು ಜಪ–ತಪ ಏತಕ್ಕೆ? ಅಮೃತ ಸೋನೆಯೆ ಸುರಿಯುತ್ತಿರಲು, ಉದರ ಪೋಷಣೆಗೆ ಕೃಷಿಯೇಕೆ? ಸ್ಪರ್ಶಮಣಿ ಕೈಯಲ್ಲಿರಲು, ಬಂಗಾರದ ಗಣಿಯ ಅಗೆತ ವ್ಯರ್ಥ ಪರಿಶ್ರಮವಲ್ಲವೆ? ಸೂರ್ಯ ತಳತಳಿಸುತ್ತಿರಲು ಸೊಡರೇಕೆ?

'ಹೇ ಚಿತ್ರರಂಗಿನಿಯೆ, ನಿನ್ನ ಸಂಗವೇ ಪರಮ ಮಂಗಲ; ಆಲಿಂಗನವೇ ಮೋಕ್ಷ! ತೆಗೆ, ಕೀರ್ತಿ ಬರಿ ಮಾಯೆ! ನೀನೆ ಸತ್ಯ; ಮಿಕ್ಕಿದ್ದೆಲ್ಲ ಹುಸಿ!' ಎಂದು ಅರ್ಜುನನು ಹೇಳಿದನು. ತನ್ನ ಎದುರು ನಿಂತು ಹೊಳೆಯುತ್ತಿರುವ ಸೌಂದರ್ಯ ಸ್ವರ್ಗವನ್ನು ತುಂಬು ಹಂಬಲದ ನೇತ್ರಸೂತ್ರದಿಂದ ಬಂಧಿಸಿ ಎಳೆಯುವಂತೆ ನೋಡಿದನು.

ಕಾಮನ ಉರಿ ದೇಹದಲ್ಲಿ ಸಂಪೂರ್ಣವಾಗಿ ನಾಳ ನಾಳವನ್ನು ಹೊಕ್ಕು, ಜೊತೆ ಜೊತೆಗೆ ಪ್ರೇಮಾನುರಾಗದ ಅರುಣಜ್ವಾಲೆ ಪ್ರಜ್ವಲಿಸುವಂತೆ ದಹಿಸಿತು. ಉಗ್ರವಾದ ಕಾಡ್ಗಿಚ್ಚು ಮರಗಿಡ ಸಮೂಹವನ್ನೆಲ್ಲ ಆವರಿಸಿಕೊಂಡು ಉರಿಯುವಂತೆ ಚಿತ್ರಾಂಗಿಯನ್ನು ಪ್ರಣಯ ಪ್ರಲಯ ಬೆಂಕಿ ಹೊತ್ತಿಕೊಂಡಿತು. ಉತ್ಕಂಠೆಯು ನಡುಗಿಹೋದಳು. ಆ ಮಧುರ ಮನ್ಮಥ ಮುಹೂರ್ತವನ್ನು ದೃಷ್ಟಿಸುತ್ತ ಹರಿವ ಕಾಲ ತನ್ನ ಕರ್ತವ್ಯವನ್ನು ಮರೆತು ತನ್ಮಯತೆಯಿಂದ ನಿಂತಿತು; ಸೃಷ್ಟಿಯು ನಿಂತಿತು!

ವಿಧಿ ಕಾಮನಬಿಲ್ಲಿನ ಇಂದ್ರಜಾಲವನ್ನು ನೆಯ್ದು ಬೀಸುತ್ತಿತ್ತು. ಆಗ ಮಧುಮದನರು ಓಕುಳಿಯ ಬಣ್ಣ ನೀರನ್ನು ಎರಚಿ ಬೆಂಕಿಯುರಿಗೆ ಎಣ್ಣೆಯನ್ನು ಚೆಲ್ಲಿದರು!

**ಸೂರೆಗೊಳ್ಳೆನ್ನ ಸರ್ವಸ್ವಮಂ, ಮೇಣೆನ್ನನಿಲ್ಲಗೈ!**

'ಪ್ರೇಮನಿಧಿ, ಪ್ರಾಣೇಶ, ನನ್ನ ಸರ್ವಸ್ವವನ್ನು ಸೂರೆಮಾಡು. ಮತ್ತು ನನ್ನನ್ನು ಇಲ್ಲವಾಗಿಸು' ಎಂದು ಹೇಳುತ್ತ ಚಿತ್ರಾಂಗಿಯು ನಳಿತೋಳುಗಳನ್ನು ನೀಡಿದಳು. ಪ್ರೇಮದಾಲಿಂಗನದಲ್ಲಿ, ಆನಂದ ವಿಸ್ಮೃತಿಯ ಭೋಗ ನಿರ್ವಾಣದಲ್ಲಿ ಎಲ್ಲವೂ ಶೂನ್ಯವಾಯಿತು!

ಮಾತಿಲ್ಲದ ಸವಿ ಮುತ್ತುಗಳು ಇಳೆಯ ತುಟಿಗೆ ಇಳಿಯುವಂತೆ ಮಲ್ಲಿಗೆಯ ಹೊದರಿನಿಂದ ಕುಸುಮಗಳು ಮಳೆಯಂತೆ ಉದುರಿದವು. ತಂಗಾಳಿ ತೀಡಿತು. ಋತುರಾಜನ ಸಾಲಂಕೃತ ಆಸ್ಥಾನದಂತೆ ಶೋಭಿಸುವ ಮನೋಹರ ಕಾನನದ ತರುಗೋಷ್ಠಿಯಿಂದ ಪಕ್ಷಿಗಳ ಮಂಗಲವಾದ್ಯವು ಸುತ್ತಲೂ ಹೊಮ್ಮಿತು. ಸ್ವರ್ಗ ಮರ್ತ್ಯಗಳು, ಕಾಲದೇಶಗಳು, ಸುಖ ದುಃಖ, ಜನ್ಮ ಮೃತ್ಯುಗಳೆಲ್ಲ ಒಂದಾಗಿ ಒಂದು ಅನಂತ ಆನಂದದಲ್ಲಿ ಮುಳುಗಿದ್ದುವು.

ಹೀಗೆ ಕಾಲದ ಪಕ್ಷಿ ಹಗಲು ಇರುಳು ಎನ್ನುವ ಎರಡು ರೆಕ್ಕೆ ಗರಿಗಳನ್ನು ಬಿಚ್ಚಿ ಸುಖ ಮಧು ಸುಧೆಯನ್ನು ಸವಿಯುತ್ತ ಹಾರುತ್ತಿತ್ತು. ನವೀನ ದಂಪತಿಗಳಿಬ್ಬರು ರಸದ ನಾವೆಯನ್ನು ಏರಿ ಜೇನು ಹೊಳೆಯಲ್ಲಿ ತೇಲಿ ಪ್ರಯಾಣ ಮಾಡಿದರು. ಅವರು ಸಡಿಲವಾದ ಮುಡಿಯ ಮುಂಗುರುಳು, ನುಣ್ಣನೆ ಕೆನ್ನೆಯ ಇಂಪು ಕೆಂದುಟಿ ಎದೆಗಳೆಂಬ ನಂದನ ದ್ವೀಪ ಬೃಂದಾವನದಲ್ಲಿ ಮಾವಿನ ತಳಿರಿನ ತೂಗುಯ್ಯಾಲೆಯ ಹಾಸಿಗೆಯಲ್ಲಿ ರಾಸಲೀಲೆಯಲ್ಲಿ ತೇಲಾಡಿದರು!

ಚಿತ್ರವಾಹನ ಪುತ್ರಿಯು ಇಂದ್ರನ ಮಗನು ಮಧು ಮದನರ ಯಕ್ಷಿಣೀ ವಿದ್ಯೆಯ ಲಲಿತ ಪಂಜರದಲ್ಲಿ ಎಣೆವಕ್ಕಿಗಳಂತೆ ಪ್ರತಿದಿನ ಭೋಗಿಸಿದರು. ಅವರು ಗೃಹ ಬಂಧು ಮಿತ್ರರನ್ನು ಮರೆತು, ಕರ್ತವ್ಯವನ್ನು ಮರೆತರು. ಹೊಸ ಹೊಸದಾಗಿ ಚಿಗುರಿ ನಲಿವ ವನದಲ್ಲಿ ಅಲೆದಾಡಿದರು. ಒಮ್ಮೆ ಪರಿಮಳದ ಹೂಗಳನ್ನು ಗಿಡಬಳ್ಳಿಗಳಿಂದ ಬಿಡಿಸಿ, ಅದನ್ನೇ ಆಶ್ರಯವಾಗಿಸಿಕೊಂಡು ಒಬ್ಬರು ಇನ್ನೊಬ್ಬರಿಗೆ ಅದನ್ನು ತೊಡಿಸುತ್ತ ಆನಂದಿಸಿದರು. ಅವರು ಒಮ್ಮೆ ಕಾಮಳ್ಳಿ ಕಾಜಾಣ ಪಿಕಳಾರ ಗಿಳಿ ಚೋರೆ ಕೋಗಿಲೆಗಳ ಉಲಿತಕ್ಕೆ ನಲಿದಾಡಿದರು. ಮತ್ತೊಮ್ಮೆ ತಮಾಷೆಯಾಗಿ ಚಳಿಯ ತಿಳಿಗೊಳದ ತಣ್ಣನೆ ಸ್ನಾನದಲ್ಲಿ ಕ್ರೀಡೆಯಾಡಿ ಆನಂದಿಸಿದರು. ಹೀಗೆ ಸವಿರಸದ ಹಣ್ಣುಗಳನ್ನು ಆಯ್ದುಕೊಂಡು ಸವಿಯುತ್ತ ದಿನದಿನವೂ ಬಿಡದೆ ಕ್ರೀಡಿಸಿ ಸುಖಪಟ್ಟರು.

**ಹೇಳುವನು ಪಾಂಡವ ಕಥಾ ವಿಸ್ತಾರಮಂ**

ಒಮ್ಮೆ ಅರ್ಜುನನು ನಡು ಹಗಲ ಬಿರು ಬಿಸಿಲು ಜಗತ್ತೆಲ್ಲವನ್ನು ಆವರಿಸಿದ ಹೊತ್ತಿನಲ್ಲಿ ಮರಗಳ ಅಡಿಯ ದಟ್ಟವಾದ ನೆರಳ ಶೀತಲ ಆಶ್ರಯದಲ್ಲಿದ್ದನು. ಹಸಿರಾದ ಹುಲ್ಲ ಚಿಗುರಿನ ಸುಪ್ಪತ್ತಿಗೆಯಲ್ಲಿ, ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯವಳ ಕೋಮಲವಾದ ತೊಡೆಗಳ ಮೇಲೆ ತಲೆಯಿಟ್ಟು ವಿಶ್ರಮಿಸಿಕೊಳ್ಳುತ್ತಿದ್ದನು.

ಅವನು ಆ ಮಧುರ ವೇಳೆಯಲ್ಲಿ ಪಾಂಡವರ ಕಥೆಯನ್ನು ವಿವರ ವಿವರವಾಗಿ ಹೇಳುತ್ತಿದ್ದನು. ಅದನ್ನು ಕೇಳುತ್ತ ಮೃಗಾಕ್ಷಿ ಚಿತ್ರಾಂಗದೆ ಬಾಹ್ಯ ಪ್ರಪಂಚವನ್ನು ಮರೆಯುತ್ತಿದ್ದಳು. ಹೊರಗಣ್ಣನ್ನು ಮುಚ್ಚಿದರೆ ಮನದ ಮಾಯಾಕ್ಷಿ ಅರಳುವುದು:

ಚಿತ್ತರಸಭಿತ್ತಿಯಲ್ಲಿ ಹಸ್ತಿನಾಪುರ ಮತ್ತು ಇಂದ್ರಪ್ರಸ್ಥ ಮುಂತಾದ ನಗರಗಳು, ನಾಡುಗಳು ಕಾಣುವವು. ಸೈನ್ಯ ರಣರಂಗದ ಕ್ಷೇತ್ರಗಳು, ಕಾಳಗದ ನೋಟಗಳು ಗೋಚರಿಸುವವು. ಪಾಂಡು ಧೃತರಾಷ್ಟ್ರ ಕೌರವ ಭೀಷ್ಮ ದ್ರೋಣ ಧರ್ಮರಾಯ ಭೀಮ ಕರ್ಣ ದ್ರೌಪದಿ ಶಕುನಿ ಶ್ರೀಕೃಷ್ಣ ಬಲರಾಮ ನಕುಲ ಸಹದೇವ ಮುಂತಾದ ಜಗದ್ವಿಖ್ಯಾತರು ಕಣ್ಣಿಗೆ ಬೀಳುವರು! ಚಿತ್ರೆಯು ಅದನ್ನು ಕೇಳುತ್ತ ಕೇಳುತ್ತ ಕನಸಿನಲ್ಲಿ ತೇಲಿ ಹೋಗುತ್ತಾ ತಾನೆ ಕನಸಾಗುವಳು.

ವನದ ಕುಸುಮಗಳಿಂದ ಸೃಷ್ಟಿಗೊಂಡು ಹರಡಿದ ಪರಿಮಳವನ್ನು ತಣ್ಣನೆಯ ಮಂದಗಾಳಿಯು ತೀಡುತ್ತಿರಲು ಕಥೆ ಹೇಳು ಹೇಳುತ್ತ ಕಿರೀಟಿಯು ಜೊಂಪಿಸುವನು. ಕಣ್ಣೆವೆಗಳನ್ನು ಮುಚ್ಚಿ ನಿದ್ದೆ ಮಾಡುವನು. ಅಬಲೆ ಚಿತ್ರಾಂಗಿಯು ಅವನ ನಿದ್ರಿಸುವ ಸೌಂದರ್ಯ ಮುದ್ರಿಕೆಯನ್ನು ಕಣ್ಣು ತಣಿಯುವಂತೆ ನೋಡಿ ನಲಿಯುವಳು. ಅವಳ ಚುಂಬನಕ್ಕೆ ಕಣ್ಣೆವೆ ಬಿಚ್ಚಿ ನಗೆಮುಗುಳನ್ನು ಇಷ್ಟಿಷ್ಟೆ ಅರಳಿಸುತ್ತ ಅವನು ಕೇಳುವನು.

'ಎಲೆ ಚೆನ್ನೆ, ನೀನಾರು? ಯಾವ ದೂರದ ದಿವ್ಯ ಲೋಕದಿಂದ ಇಳಿದು ಬಂದು ನನ್ನ ಬಾಳನ್ನು ಇಷ್ಟು ಸವಿಗೊಳಿಸಿತ್ತಿರುವೆ? ನಿನ್ನ ಹೆಸರೇನು ಹೇಳು. ಅದನ್ನು ಕೇಳಿ ಸವಿದು ಸುಖಿಸುತ್ತೇನೆ. ಎಷ್ಟೋ ಸಲ ಕೇಳಿದೆನು. ನೀನು ಹೆಸರು ಹೇಳದಿರುವೆ! ನಿನಗೆ ಹೆಸರಿಲ್ಲವೆ? ನೀನು ನನಗೆ ಮಾಯಾ ಸ್ವಪ್ನದಂತೆ ಕಾಣಿಸುತ್ತಿರುವೆ. ಸತ್ಯವನ್ನು ತಿಳಿಯೆನು. ಓ ಸವಿಗನಸೆ, ಮನದನ್ನೆ, ಹೆಸರನ್ನು ಹೇಳು!'

ತುಟಿಯನ್ನು ಅರಳಿಸುತ್ತ ಮರಿಕೋಗಿಲೆಯ ರೀತಿ ಚಿತ್ರಾಂಗಿ ಸವಿನುಡಿ ಆಡಿದಳು:

**ಮಾಯೆ ನನ್ನಿಯ ಮೊದಲ ಛಾಯೆ!**

'ಓ ನನ್ನ ಎದೆಯನ್ನ ಹೆಸರೇಕೆ? ಬಿಸಿಲ ಬೇಗೆಗೆ ಬಳಲಿ ದಾರಿ ಬಳಿಯ ತೋಟದಲ್ಲಿ ರುಚಿಯಾದ ಮಾವಿನ ಹಣ್ಣನ್ನು ಆಯ್ದುಕೊಂಡು ಸವಿದುಣ್ಣುವವನಿಗೆ ಹೊಲದ ಹೆಸರಿನ ಗೊಡವೆ ಏಕೆ? ಓ ನನ್ನ ಉಸಿರ ಒಲವೆ, ಹದವಾಗಿ ಮಾಗಿದ ಹಣ್ಣನ್ನು ಉಂಡು ಸವಿ!

'ನಾನು ಯಾರಾದರೇನು? ಹೆಸರಿನಲ್ಲಿ ರಸವೆ? ಹೆಸರಿಲ್ಲದವಳು ನಾನು. ಬರಿ ಮಾಯೆ! ಸವಿ ಸೊನ್ನೆ! ಆದರೇನು! ಮನದನ್ನೆ, ಮಾಯೆ ಸತ್ಯದ ಮೊದಲ ಛಾಯೆ! ನೀನು ಇಂದಲ್ಲದಿದ್ದರೆ ಮುಂದೆ, ಎಂದಾದರೂ ಒಂದು ದಿನ ನಾನಾರು ಎನ್ನುವುದನ್ನು ತಿಳಿಯುವೆ.

'ನೋಡು ಈ ಮಧುಮಯ ಕಾನನ ಹೇಗೆ ಹಗಲುಗನಸಿನಲ್ಲಿ ಮುಳುಗಿದೆ! ತಣ್ಣನೆಯ ಗಾಳಿ ಬೀಸಣಿಗೆಯಂತೆ ಹೇಗೆ ತೀಡುತ್ತಿದೆ! ಅಲ್ಲಿ ನೋಡು, ಬಿಸಿಲ ಹನಿ ಹಸುರಿನಲ್ಲಿ ಕಣ್ಣಿಗೆ ತಂಪನ್ನು ಎರಚುತ್ತ ಕುಣಿಯುತ್ತಿದೆ! ನವಿಲು ಆ ಮರದ ಕೊಂಬೆಯ ಮೇಲೆ ಚಿತ್ರ ಬರೆದಂತೆ ಕುಳಿತಿದೆ! ಆ ಹರಿಣಿ ತನ್ನ ಮರಿಯೊಡನೆ ಹೇಗೆ ಸರಸವಾಡುತ್ತಿದೆ! ಅದೊ, ಬನದ ಮೌನದ ತೂರ್ಯವೆಂಬ ವಾದ್ಯವನ್ನೆ ಊದುವ ರೀತಿಯಲ್ಲಿ ವನವನವೇ ಪ್ರತಿಧ್ವನಿಸುವಂತೆ ಕೋಕಿಲ ಕಂಠವಾಣಿ ಹೊಮ್ಮಿ ಬರುತ್ತಿದೆ! ಆಃ, ಅದು ಗಿರಿಯಿಂದ ಗಿರಿಗೆ ಹೇಗೆ ಅನುರಣಿತವಾಗುತ್ತಿದೆ ಕೇಳು!'

**ಇಕ್ಷುದಂಡ ಕೋದಂಡನಿಂ ಪಡೆದು**